hall, lounge, Conference hall and for other amenities along with 100 rooms, ಇವುಗಳಿಗೆ ೩ ರೂಮ್‌ಗಳನ್ನು ಸೇರಿಸಿಕೊಂಡಿದ್ದರು, ಕೊನೆಗೆ ೬೦ ರೂಮ್‌ಗಳನ್ನು ಸೇರಿಸಿ ಕೊಂಡು ಆದರ ಡಿಸೈನ್ ಮತ್ತಿತರೆ ಕೆಲಸಗಳೆಲ್ಲಾ ಸೇರಿಕೊಂಡು ಜಾಸ್ತಿಯಾಯಿತು.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—೧೯೭೮-೭೯ರಲ್ಲಿ ಆಗಿದ್ದ ಅಂದಾಜು ಜಾಸ್ತಿಯಾಗಲು ಸಮ್ಮೇಳನ ಸಭಾಂಗಣ, ಹೆಚ್ಚುವರಿ ರೂಮ್ ಇತರೆ ಕೆಲವು ಐಟಂಗಳನ್ನು ಸೇರಿಸಿಕೊಂಡಿದ್ದರಿಂದ ಅಂದಾಜು ಜಾಸ್ತಿಯಾಗಿದೆ. ಫ್ಲೋರಿಂಗ್ ಕೂಡ ಜಾಸ್ತಿಯಾಗಿರಬೇಕು. ೧೯ ಲಕ್ಷ ರೂಪಾಯಿಗಳಲ್ಲಿ ಪೀಠೋಪಕರಣಗಳನ್ನು ಸೇರಿಸಿಕೊಂಡಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲು ಅಂದಾಜು ತಯಾರು ಮಾಡುವಾಗ ರಿವೈಸ್ ಮಾಡ ಬೇಕೆಂದು ಮಾಡಿದ್ದಾರೆ. ಹಿಂದೆ ಯಾವುದು ಇತ್ತೋ ಗೊತ್ತಿಲ್ಲ. ಅಧ್ಯಕ್ಷರು ಬಂದು ನೋಡಿ ಕೆಲವು ಬದಲಾವಣೆಗಳನ್ನು ಸೂಚಿಸಿದಾಗ ಪರಿಷ್ಕೃತ ಅಂದಾಜು ತಯಾರು ಮಾಡಿದ್ದರಿಂದ ಕಾಸ್ಟ್ ಜಾಸ್ತಿ ಯಾಗಿದೆ, ತಾವು ಕೇಳುವುದೆಲ್ಲಾ ಬೇಕಾದರೆ ಡಿಟೈಲ್ ಎಸ್ಟಿಮೇಟ್ ನೋಡಿ ಹೇಳಬೇಕಾಗುತ್ತದೆ.

ಶ್ರೀ ಬಿ ವಿ. ರಾಮಚಂದ್ರರೆಡ್ಡಿ.—೪೭,೫೬೬ ಚೀಲ ಸಿಮೆಂಟ್ ನೀಡಿದ್ದೇವೆಂದು ಹೇಳಿದ್ದಾರೆ. ಸಿಮೆಂಟನ್ನು ಕಾಮಗಾರಿ ಇಲಾಖೆಯವರು Indian Standards specification ಪ್ರಕಾರ ಖರ್ಚು ಮಾಡಬೇಕೆಂದು ಹೇಳುತ್ತಾರೆ. ಇವರು ಯಾವ ಆಧಾರದ ಮೇಲೆ ಖರ್ಚು ಮಾಡಿದ್ದಾರೆ ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಒಂದು ಅಂದಾಜನ್ನು ಸ್ವೀಕೃತ ಮಾಡಿದ ಮೇಲೆ ಸಿಮೆಂಟನ್ನು ಪ್ಲಾಸ್ಟರಿಂಗ್, ಬೀಮ್ as per specification and design. ಎಷ್ಟು ಐಟಂಗಳು ಇರುತ್ತವೆಯೋ ಆ ಕೆಲಸಗಳಿಗೆ ಇಂಡಿಯನ್ ಸ್ಟ್ಯಾಂಡರ್ಡ್ ಸ್ಪೆಸಿಫಿಕೇಶನ್ ಪ್ರಕಾರ ಸಿಮೆಂಟ್ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸಿಮೆಂಟನ್ನು ಇಂಡಿಯನ್ ಸ್ಟ್ಯಾಂಡರ್ಡ್ ಸ್ಪೆಸಿಫಿಕೇಶನ್ ಪ್ರಕಾರ ಯೂಸ್ ಮಾಡಿದರೂ ೪ ಸಾವಿರ ಮೂಟೆಗಳು ವ್ಯತ್ಯಾಸ ಬರುತ್ತದೆ. ಉದಾಹರಣೆ ೧ : ೪ ಇಂಡಿಯನ್ ಸ್ಟ್ಯಾಂಡರ್ಡ್ ಸ್ಪೆಸಿಫಿಕೇಶನ್ ಪ್ರಕಾರ ಉಪಯೋಗಿಸಿದರೆ ಇನ್ನು ಸ್ವಲ್ಪ ಜಾಸ್ತಿ ಉಪ ಯೋಗಿಸಿದರೂ ನಾಲ್ಕೈದು ಸಾವಿರ ಮೂಟೆ ಸಿಮೆಂಟ್ ಉಳಿಯುತ್ತದೆ. ಜಾಸ್ತಿ ಉಪಯೋಗಿಸುವುದು ಸರಿಯೇ ? ಇದರಲ್ಲಿ ತಪ್ಪಾಗಿದ್ದರೆ ತನಿಖೆ ಮಾಡಿಸುತ್ತೀರಾ ? ಇಂಥಿಂಥಾ ಐಟಂಗೆ ಇಷ್ಟಿಷ್ಟು ಸಿಮೆಂಟ್ ಹಾಕಬೇಕೆಂದು ನಿಮ್ಮಲ್ಲಿ ಪಟ್ಟಿ ಇದೆಯೇ ? ಇಷ್ಟಿಷ್ಟು ಸಿಮೆಂಟ್ ಕೊಟ್ಟಿದ್ದೇವೆ ಎನ್ನುವ ಅಂಕಿಅಂಶಗಳು ನಿಮ್ಮಲ್ಲಿ ಇವೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಲೆಕ್ಕಾಚಾರ ಮಾಡಿ ಎಲ್ಲೆಲ್ಲಿ ಎಷ್ಟೆಷ್ಟು ಸಿಮೆಂಟ್ ಖರ್ಚು ಮಾಡ ಬೇಕೆನ್ನುವುದನ್ನು ಡಿಸೈನ್ ಮಾಡಿ ಡಿಸೈನ್ ಸೆಕ್ಷನ್ ಯಾವ ಪ್ರಕಾರ ಮಾಡಿರುತ್ತದೋ ಆ ಪ್ರಕಾರ ಖರ್ಚು ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದೇವೆ. ಯಾವ್ಯಾವ ಪ್ರಮಾಣದಲ್ಲಿ ಎಷ್ಟೆಷ್ಟು ಸಿಮೆಂಟ್ ಖರ್ಚಾಗಿದೆ ಎಂಬುದನ್ನು ಉತ್ತರದಲ್ಲಿ ಕೊಟ್ಟಿದ್ದೇವೆ, ಆದರೂ ಕೂಡ ಜಾಸ್ತಿ ಸಿಮೆಂಟ್ ಖರ್ಚಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇನ್ನೊಂದು ಸಾರಿ ಲೆಕ್ಕಾಚಾರ ಮಾಡಿಸುತ್ತೇವೆ. ಏನಾದರೂ ಆ ರೀತಿ ಹೆಚ್ಚು ಉಪಯೋಗವಾಗಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳು ತ್ತೇವೆ.

Cauvery II Stage

479. SRI M. CHANDRASHEKAR (Jayanagar).—Will the Minister for Housing and Urban Development be pleased to state :—

(a) the amount spent either to by BWSSB towards the laying of Cauvery II Stage Water Mains ;

(b) the physical progress of the work upto date ;

(c) whether it is possible to commission the said main by November 1981 as programmed ;

(d) if not the reasons for delay ;

(e) number of new top posts created in the Project Division for Cauvery II Stage Work and the details of these posts ;

(f) whether it is a fact that many top posts are created in the Project Division even though the project staff of BWSSB is quite sufficient to carry on the Project work also ?

SRI DHARAM SINGH NARAYANA SINGH (Minister for Housing and Urban Development).—

(a) Out of the total estimated cost of Rs. 3000.00 lakhs for production and conveyance of water, the expenditure upto end of Dec. 1981 is Rs. 2656.00 lakhs.

(b) So far 35 K. M. length of pipe line is laid out of 78 K. M. from T K. Halli to Bangalore. Fabrication, spinning and gunniting of pipes are in progress. Laying of pipe line from S. E. Circle of High Grounds in the city for a length of 6.5 K. M. has been started.

The ancillary units like the construction of water treatment complex. pump houses and pure water tanks are nearing completion. The pumps, motors and transforms are received and are under erection.

(c) As per original programme, the scheme is to be completed by December 1982 and not November 1981. However in view of scarcity of water, the Board is trying to complete the water supply portion by 15-8-1982.

(d) Actually there is no delay.

(e) One post of Chief Engineer (Projects) and one post of Superintending Engineer (Construction) have been created for the Project. The Chief Engineer (P) is in overall incharge of the Cauvery Water Supply Scheme Stage II.

The Superintending Engineer (Construction) is in charge of the distribution system to be laid in city and the construction of Ground Level Reservoirs. Sewerage and Sewage treatment works under C.W.S.S. Stage II.

The post of Deputy Chief Engineer has been upgraded as Superintending Engineer (Designs and is in over all charge of the procurement of stores, designs under CWSS Stage II and investigation and designs of C W.S.S. Stage III. He is also incharge of Technical Cell for vigilance and quality control.

(f) The post of Chief Engineer (P) has been created exclusively for the C.W.S.S. Stage II since the Board felt one Chief Engineer

cannot look after both maintenance of water supply, revenue collection and the project. The post of S.E. (C) has been created to speed up the construction of GLR's and Sewerage and construction of sewage treatment plants.

The post of superintending Engineer (Designs) is necessary for the procurement of stores under the project and also for carrying out the designs of CWSS Stage II and the investigation and designs of C.W.S.S. Stage III. In addition he is also incharge of vigilance and quality control directly under the control of Chairman. These works cannot be handled by the present staff of the Board with an annual outlay of Rs. 24.00 crores.

ಶ್ರೀ ಎಂ. ಚಂದ್ರಶೇಖರ್.—ಈ ಕಾವೇರಿ ಎರಡನೇ ಹಂತದ ಕಾಮಗಾರಿ ಕೆಲಸಕ್ಕೆ ಒಂದು ಮುಖ್ಯ ಇಂಜಿನಿಯರ್ ಹುದ್ದೆಯನ್ನು ಮತ್ತು ಒಂದು ಅಧೀಕ್ಷಕ ಇಂಜಿನಿಯರ್ (ನಿರ್ಮಾಣ) ಹುದ್ದೆಯನ್ನು ಸೃಷ್ಟಿಸಲಾಗಿದೆ ಎಂದು ಹೇಳಿದ್ದೀರಿ. ಈ ಹುದ್ದೆಗಳ ಜೊತೆಗೆ ಇತ್ತೆ ಬೇರೆ ಯಾವ ಯಾವ ಸಿಬ್ಬಂದಿ ಯಾವ ಯಾವ ದರ್ಜೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಇವರಿಗಾಗಿ ತಿಂಗಳಿಗೆ ಎಷ್ಟು ಖರ್ಚಾಗುತ್ತಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಕಾವೇರಿ ಎರಡನೇ ಹಂತದ ಯೋಜನೆಯನ್ನು ಜಾಗ್ರತೆ ಮಂಗಿಸಬೇಕೆಂದು ಕೊಂಡು ಈ ಎರಡು ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಇವರಿಗಾಗಿ ಆಗತಕ್ಕಂಥ ಖರ್ಚು ಒಟ್ಟಿನ ಖರ್ಚಿನಲ್ಲಿ ೩ ಪರ್ಸೆಂಟ್ ಆಗಬಹುದು.

ಶ್ರೀ ಪಿ. ರಾಮದೇವ್.—ಈ ಕಾವೇರಿ ಎರಡನೇ ಹಂತದ ಯೋಜನೆ ಮುಗಿದ ಮೇಲೆ ಒಂದು ದಿವಸಕ್ಕೆ ೩೦ ಮಿಲಿಯನ್ ಗ್ಯಾಲನ್ ನೀರನ್ನು ಕೊಡುವ ಉದ್ದೇಶವಿದ್ದರೂ ಸಹ ಇದು ಬೆಂಗಳೂರಂಥ ನಗರಕ್ಕೆ ಸಾಲುವುದಿಲ್ಲವೆಂದು ತಾವೇ ಹೇಳಿದ್ದೀರಿ. ಆದ ಕಾರಣ ಈ ಕೆಲಸ ಮುಗಿದ ಕೂಡಲೇ ಅರ್ಕಾವತಿಯಿಂದ ನೀರು ತರುವ ಕೆಲಸ ಕೈಕೊಳ್ಳುತ್ತೀರಾ ? ಈ ಯೋಜನೆಗೆ ಈ ಮೊದಲೇ ಸರ್ಕಾರದಿಂದ ಮಂಜೂರಾತಿ ದೊರಕಿರುವುದರಿಂದ ಜಾಗ್ರತೆ ಕಾರ್ಯಗತ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಕಾವೇರಿ ಎರಡನೇ ಹಂತದ ಯೋಜನೆಯನ್ನು ಮುಗಿಸಿದ ನಂತರ ಕಾವೇರಿ ಮೂರನೇ ಹಂತದ ಕೆಲಸವನ್ನು ಮತ್ತು ಅರ್ಕಾವತಿಯಿಂದ ನೀರು ತರುವ ಕೆಲಸವನ್ನು ತೆಗೆದುಕೊಳ್ಳಬೇಕೆಂಬುದು ಪರಿಶೀಲನೆಯಲ್ಲಿದೆ. ಇದನ್ನು ಯಾವ ರೀತಿ ಮಾಡಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ.

SRI A. LAKSHMISAGAR.—The execution of II Stage Cauvery Water Supply is supposed to bring an additional quantity of 30 million gallons of water. I understand that the Board has already committed to the supply of water to several places like Yelahanka, Krishnarajapuram. If that is so, out of 30 million gallons, how much of water is committed to be given to these places ?

SRI DHARAM SINGH.—For that, I want a separate notice. I do not have particulars.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆಯವರಿಗೂ ಈ ನೀರನ್ನು ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆಯೇ ಹೇಗೆ ?

ಶ್ರೀ ಧರ್ಮಸಿಂಗ್.—ಈಗ ಒಬ್ಬರಿಗೆ ಒಂದು ದಿವಸಕ್ಕೆ ೧೫ ರಿಂದ ೧೬ ಗ್ಯಾಲನ್ ನೀರನ್ನು ಕೊಡುತ್ತಿದ್ದೇವೆ. ಕಾವೇರಿ ಎರಡನೇ ಹಂತದ ಯೋಜನೆ ಮುಗಿದ ಮೇಲೆ ಈ ಪ್ರಮಾಣವನ್ನು ಹೆಚ್ಚು ಮಾಡಲಾಗುತ್ತದೆ. ಮುಖ್ಯವಾಗಿ ಬೆಂಗಳೂರು ನಗರ ಕಾರ್ಪೊರೇಷನ್ ಏರಿಯಾದಲ್ಲಿರುವ ಜನರಿಗೆ

ಮೊದಲು ನೀರನ್ನು ಕೊಟ್ಟು ನಂತರ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಹೊಸದಾಗಿ ಸೇರಿರುವ ಹಳ್ಳಿಗಳಿಗೆ ಸ್ವಲ್ಪ ಪ್ರಮಾಣದಲ್ಲಿ ನೀರನ್ನು ಕೊಡಲು ಪ್ರಯತ್ನ ಮಾಡುತ್ತೇವೆ. ಮತ್ತೆ ಬೇರೆಯವರಿಗೆ ಎಷ್ಟು ನೀರು ಕೊಡಬೇಕೆಂಬ ವಿವರ ನನ್ನ ಹತ್ತಿರ ಇಲ್ಲ. ಈ ಬಗ್ಗೆ ತಾವು ಪ್ರತ್ಯೇಕ ಪ್ರಶ್ನೆ ಹಾಕಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ. — ಈ ಕಾವೇರಿ ಎರಡನೇ ಹಂತದ ಯೋಜನೆಗೆ ಅಸ್ತಿಭಾರಶಿಲೆ ಹಾಕುವ ಸಂದರ್ಭದಲ್ಲಿ ೧೯೮೧ನೇ ಡಿಸೆಂಬರ್ ತಿಂಗಳಲ್ಲಿ ಈ ಕೆಲಸವನ್ನು ಮುಗಿಸಲಾಗುವುದೆಂದು ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಜೂನ್ ೧೯೮೨ ಮುಗಿದರೂ ಈ ಕೆಲಸ ಆಗಲಿಲ್ಲ. ಈ ಕೆಲಸಕ್ಕೆಂದೇ ಪ್ರತ್ಯೇಕ ಸಿಬ್ಬಂದಿಯನ್ನು ನೇಮಕ ಮಾಡಿದ್ದರೂ ಸಹ ೬ ತಿಂಗಳವರೆಗೆ ನಿಧಾನವಾಗಲು ಕಾರಣವೇನು ? ಇದನ್ನು ಯಾವಾಗ ಮಾಡಿ ಮುಗಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಈಗಾಗಲೇ ಆಗಸ್ಟ್ ೧೫ಕ್ಕೆ ಮುಗಿಸಲಾಗುವುದೆಂದು ಹೇಳಿದ್ದೇನೆ. ಆದ್ದರಿಂದ ಪದೇ ಪದೇ ಹೇಳುವ ಅವಶ್ಯಕತೆ ಇಲ್ಲ. ಈಗಾಗಲೇ ಮಾಡಿ ಮುಗಿಸಿರುವಂತಹ ಕೆಲಸದ ಪ್ರಗತಿಯಂನ್ನು ಉತ್ತರದಲ್ಲಿ ಹೇಳಿದ್ದೇನೆ. ಈ ಯೋಜನೆಗೆಂದೇ ಮುಖ್ಯ ಇಂಜಿನಿಯರ್ ಅವರ ನೇತೃತ್ವದಲ್ಲಿ ಪ್ರತ್ಯೇಕ ವಿಭಾಗ ರಚನೆ ಮಾಡಿದ್ದರಿಂದ ಈ ಕೆಲಸ ಜಾಗ್ರತೆ ಆಗುತ್ತಿದೆ ಈ ಕೆಲಸವನ್ನು ಜಾಗ್ರತೆ ಮಾಡಿ ಮುಗಿಸಲಾಗುವುದೆಂದು ಮುಖ್ಯಮಂತ್ರಿಗಳು ವಾಗ್ದಾನ ಮಾಡಿದ್ದರು. ಅದರಂತೆ ಕೆಲಸ ನಡೆದಿದೆ. ಈ ಮೊದಲು ಫ್ಯಾಕ್ಟ್ಸ್ ಕಂಪನಿಯವರು ದಿನಕ್ಕೆ ೭–೮ ಪೈಪ್‌ಗಳನ್ನು ತಯಾರು ಮಾಡುತ್ತಿದ್ದರು ; ಈ ಕೆಲಸ ಜಾಗ್ರತೆ ಆಗಬೇಕಾಗಿದೆ ಎಂದು ನಾವು ಅವರಿಗೆ ಹೇಳಿದ್ದರಿಂದ ಅವರು ದಿನಕ್ಕೆ ೫೦ ಪೈಪ್‌ಗಳನ್ನು ತಯಾರಿಸಿ ಕೊಟ್ಟ ಕಾರಣದಿಂದ ಇಷ್ಟೊಂದು ಕೆಲಸವಾಗಿದೆ. ಎಲ್ಲ ಕಡೆಯೂ ಕೆಲಸ ಪಂಂಗಿಯುತ್ತಾ ಬಂದಿದೆ, ಆಗಸ್ಟ್ ೧೫ಕ್ಕೆ ಇದು ಮುಗಿಯುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಭೂ ಮಟ್ಟದ ಜಲಾಶಯಗಳು, ಒಳಚರಂಡಿ ಹಾಗೂ ಮಲ ಶುದ್ಧೀಕರಣ ಘಟಕಗಳ ನಿರ್ಮಾಣದ ಕಾಮಗಾರಿಯನ್ನು ತ್ವರಿತಗೊಳಿಸಲು ಅಧೀಕ್ಷಕ ಇಂಜಿನಿಯರ್ (ಸಿ) ಹುದ್ದೆಯನ್ನು ಸೃಷ್ಟಿಸಲಾಗಿದೆ ಎಂದು ಹೇಳಿದ್ದೀರಿ. ಈ ಹುದ್ದೆಯನ್ನು ಸೃಷ್ಟಿ ಮಾಡಿ ೨ ವರ್ಷಗಳಾದ ಕಾರಣ ಇಲ್ಲಿಯವರೆಗೆ ಎಷ್ಟು ಕೆಲಸವಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಧರ್ಮಸಿಂಗ್.—ಒಳಚರಂಡಿ ಮತ್ತು ಮಲ ಶುದ್ಧೀಕರಣ ಘಟಕಗಳ ನಿರ್ಮಾಣಕ್ಕೆಂದು ಇಲ್ಲಿಯವರೆಗೆ ೨.೨೯ ಲಕ್ಷ ರೂ. ಗಳನ್ನು ಖರ್ಚು ಮಾಡಿದ್ದೇವೆ.

Construction of Houses in and around Mysore City

712. SRI D. JAYADEVARAJ URS (Chamundeshwari) —Will the Minister for Housing and Urban Development be pleased to state ;—

(a) the number of sites formed and the number of houses constructed in and around Mysore City at the time of relaxation of Rules of Land ceiling Limits ;

(b) whether the scheme has been proposed to provide them basic amenities like light and water etc., by the Mysore City Corporation ;

(c) the estimated cost of this Scheme ?

SRI DHARAM SINGH (Minister for Housing and Urban Development).—

(a) 607 houses.

(b) No.

(c) Does not arise.